<u>ಕರ್ನಾಟಕ ಸರ್ಕಾರದ ನಡವಳಿಗಳು</u>

**ವಿಷಯ:** 2020-21 ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವ ಚರ್ಮಶಿಲ್ಪ ಯಂತ್ರಾಧಾರಿತ ಉತ್ಪಾದನಾ ಘಟಕಗಳನ್ನು ಸ್ಥಾಪಿಸುವ ಯೋಜನೆ ಅನುಷ್ಠಾನಗೊಳಿಸುವ ಬಗ್ಗೆ

**ಓದಲಾಗಿದೆ:** ವ್ಯವಸ್ಥಾಪಕ ನಿರ್ದೇಶಕರು, ಡಾ|| ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ಇವರ ಪತ್ರ ಸಂಖ್ಯೆ: ಲಿಡ್ಕರ್/ತಾಂತ್ರಿಕ/2019-20/2979 ದಿನಾಂಕ: 19-03-2020

********

<u>ಪ್ರಸ್ತಾವನೆ:</u>

2020-21 ನೇ ಸಾಲಿನ ಆಯವ್ಯಯ ಘೋಷಣೆಯ ಕಂಡಿಕೆ-87 ರಲ್ಲಿ "ಚರ್ಮ ಕುಶಲಕರ್ಮಿಗಳು **"ಚರ್ಮಶಿಲ್ಪ"** ಎಂಬ ಯಂತ್ರಾಧಾರಿತ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ಡಾ|| ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಮೂಲಕ ಘಟಕ ವೆಚ್ಚ ರೂ.10.00 ಲಕ್ಷಗಳಲ್ಲಿ ರೂ.5.00 ಲಕ್ಷ ಸಹಾಯಧನವನ್ನು 250 ಫಲಾನುಭವಿಗಳಿಗೆ ನೀಡುಲಾಗುವುದು. ಈ ಉದ್ದೇಶಕ್ಕಾಗಿ 2020-21 ನೇ ಸಾಲಿನಲ್ಲಿ ರೂ. 12.50 ಕೋಟಿಗಳನ್ನು ಒದಗಿಸಲಾಗಿದೆ" ಎಂದು ತಿಳಿಸಲಾಗಿದೆ.

ಡಾ|| ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮವು ಪರಿಶಿಷ್ಟ ಜಾತಿಯ ಚರ್ಮ ಕುಶಲಕರ್ಮಿಗಳ ಶ್ರೇಯೋಭಿವೃದ್ಧಿಗಾಗಿ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಾ ಬಂದಿರುತ್ತದೆ. ಚರ್ಮ ಕುಶಲಕರ್ಮಿಗಳು ಪಾದರಕ್ಷೆ ಮತ್ತು ಇತರೆ ಚರ್ಮ ವಸ್ತುಗಳನ್ನು ಪಾರಂಪರಿಕ ವಿಧಾನದಲ್ಲಿ ತಯಾರಿಸುತ್ತಿದ್ದು ಪ್ರಸ್ತುತ ಮಾರುಕಟ್ಟೆಯಲ್ಲಿ ಖರೀದಿ ಮಾಡುವುದು ಕಷ್ಟಸಾಧ್ಯವಾಗಿರುವ ಹಿನ್ನೆಲೆಯಲ್ಲಿ ಆಧುನಿಕ ಯಂತ್ರೋಪಕರಣಗಳನ್ನು ಉಪಯೋಗಿಸಿ ಗುಣಮಟ್ಟದ ಉತ್ಪನ್ನಗಳನ್ನು ತಯಾರಿಸಲು ಅನುಕೂಲವಾಗುವಂತೆ " **ಚರ್ಮಶಿಲ್ಪ"** ಯಂತ್ರಾದಾರಿತ ಉತ್ಪಾದನಾ ಘಟಕಗಳ ಸ್ಥಾಪನಾ ಯೋಜನೆಯನ್ನು ರೂಪಿಸಿ ದಿನಾಂಕ:25.02.2020 ರಂದು ನಡೆದ ನಿಗಮದ 209ನೇ ಮಂಡಳಿ ಸಭೆಯ ಮುಂದೆ ಮಂಡಿಸಲಾಗಿತ್ತು. ಮಂಡಳಿ ಸಭೆಯಲ್ಲಿ ಹೊಸ ಯೋಜನೆ ವಿವರಗಳನ್ನು ಗಮನಿಸಿ 2020-21 ನೇ ಸಾಲಿನ ಆಯವ್ಯಯದಲ್ಲಿ ಸರ್ಕಾರವು ಘೋಷಿಸಿದಲ್ಲಿ ಸ್ವಯಂ ಉದ್ಯೋಗ ಯೋಜನೆಯಡಿ ಅನುಷ್ಠಾನಗೊಳಿಸುವುದಕ್ಕೆ ಅನುಮೋದನೆ ನೀಡಿರುತ್ತದೆ.

ಪರಿಶಿಷ್ಟ ಜಾತಿಗೆ ಸೇರಿದ ಚರ್ಮ ಕುಶಲಕರ್ಮಿಗಳು ಅಥವಾ ಕುಶಲಕರ್ಮಿಗಳ ಸ್ವ-ಸಹಾಯ ಸಂಘಗಳು/ ಸಹಕಾರ ಸಂಘಗಳು ಪಾರಂಪರಿಕ ವಿಧಾನದಲ್ಲಿ (Traditional Method) ಪಾದರಕ್ಷೆಗಳನ್ನು/ಚರ್ಮ ವಸ್ತುಗಳನ್ನು ತಯಾರಿಸುತ್ತಿದ್ದಾರೆ. ಇದರಿಂದ ಉತ್ತಮ ಗುಣಮಟ್ಟದ ಪಾದರಕ್ಷೆಗಳನ್ನು ತಯಾರಿಸಲು ಸಾಧ್ಯವಾಗದೆ ಮಾರುಕಟ್ಟೆಯಲ್ಲಿ ಲಭ್ಯವಿರುವ ಬಹುರಾಷ್ಟ್ರೀಯ ಕಂಪನಿಗಳು ಉತ್ಪಾದನೆ ಮಾಡುತ್ತಿರುವ ಪಾದರಕ್ಷೆಗಳು/ಚರ್ಮ ವಸ್ತುಗಳ ಜೊತೆ ಸ್ಪರ್ಧೆ ಮಾಡಲು ಸಾಧ್ಯವಾಗುತ್ತಿಲ್ಲ. ಇದರಿಂದ ಬಹುತೇಕ ಕುಶಲಕರ್ಮಿಗಳು ನಿರುದ್ಯೋಗ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ ಹಾಗೂ ಗುಡಿ ಕೈಗಾರಿಕೆ ನಶಿಸಿ ಹೋಗುತ್ತಿದೆ.

ಡಾ|| ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದಿಂದ ಕಳೆದ 05 ವರ್ಷಗಳಲ್ಲಿ ಸುಮಾರು 6000 ಕ್ಕಿಂತ ಹೆಚ್ಚು ಕುಶಲಕರ್ಮಿಗಳಿಗೆ ಪಾದರಕ್ಷೆ/ಚರ್ಮ ವಸ್ತುಗಳ ತಯಾರಿಕೆಯಲ್ಲಿ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡಲಾಗಿದ್ದು ಉತ್ಪಾದನೆಯಲ್ಲಿ ಯಂತ್ರೋಪಕರಣಗಳನ್ನು ಬಳಸುವ ಬಗ್ಗೆಯು ತರಬೇತಿ ನೀಡಲಾಗಿದೆ ಹಾಗೂ ಒಂದು ಚರ್ಮ ಹೊಲಿಗೆ ಯಂತ್ರ ಮತ್ತು ಒಂದು ಟೂಲ್‌ಕಿಟ್ ಅನ್ನು ಉಚಿತವಾಗಿ ಒದಗಿಸಲಾಗಿದೆ. ಆದರೆ ಈ ಯಂತ್ರಗಳು ಒಂದು ಸಂಪೂರ್ಣವಾದ ಮತ್ತು ಗುಣಮಟ್ಟದ ಪದಾರ್ಥಗಳನ್ನು ತಯಾರಿಸುವ ಉತ್ಪಾದನಾ ಘಟಕವನ್ನು ಸ್ಥಾಪಿಸಲು ಸಾಧ್ಯವಾಗುವುದಿಲ್ಲ. ಇದಲ್ಲದೆ ತರಬೇತಿ ಪಡೆದ ಕುಶಲಕರ್ಮಿಗಳು ನಿರುದ್ಯೋಗಿಗಳಾಗುವ ಸಾಧ್ಯತೆ ಇರುತ್ತದೆ.

ಈ ಹಿನ್ನೆಲೆಯಲ್ಲಿ ಕುಶಲಕರ್ಮಿಗಳು ಅಥವಾ ಕುಶಲಕರ್ಮಿಗಳ ಸ್ವ-ಸಹಾಯ ಸಂಘಗಳು/ ಸಹಕಾರ ಸಂಘಗಳು ಆಧುನಿಕ ಯಂತ್ರೋಪಕರಣಗಳನ್ನು ಅಳವಡಿಸಿ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ಮುಂದೆ ಬಂದಲ್ಲಿ "ಚರ್ಮಶಿಲ್ಪ" ಯಂತ್ರಾಧಾರಿತ ಉತ್ಪಾದನಾ ಘಟಕ ಸ್ಥಾಪನಾ ಯೋಜನೆಯಡಿ ಯಂತ್ರೋಪಕರಣಗಳನ್ನು ಖರೀದಿಸಿ ತಾಂತ್ರಿಕ ಸಲಹೆಯೊಂದಿಗೆ ಅಳವಡಿಸಿಕೊಡಬಹುದಾಗಿದೆ.

ಘಟಕ ವೆಚ್ಚ:

| ಕ್ರ.ಸಂ | ವಿವರಗಳು | ದರ (ರೂ.ಲಕ್ಷಗಳಲ್ಲಿ) |
|---|---|---|
| 1 | ಯಂತ್ರೋಪಕರಣಗಳು | 3.50 |
| 2 | ದುಡಿಮೆ ಬಂಡವಾಳ (ಕಚ್ಚಾಮಾಲು ಮತ್ತು ಲೇಬರ್ ಚಾರ್ಜಸ್) | 6.00 |
| 3 | ಇತರೆ ವೆಚ್ಚಗಳು | 0.50 |
| | ಒಟ್ಟು | 10.00 |

ಮೇಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಕಇ 201 ಎಸ್‌ಎಲ್ ಪಿ 2020 ಬೆಂಗಳೂರು, ದಿನಾಂಕ:04-09-2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, 2020-21 ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಪರಿಶಿಷ್ಟ ಜಾತಿಯ ಚರ್ಮ ಕುಶಲಕರ್ಮಿಗಳಿಗಾಗಿ "ಚರ್ಮ ಶಿಲ್ಪ" ಯಂತ್ರಾದಾರಿತ ಉತ್ಪಾದನಾ ಘಟಕಗಳನ್ನು ಸ್ಥಾಪಿಸುವ ಯೋಜನೆಯನ್ನು ಅನುಬಂಧದಲ್ಲಿರುವ ಷರತ್ತುಗಳು ಮತ್ತು ಮಾನದಂಡಗಳ ಅನುಸಾರ ರೂ. 10.00 ಲಕ್ಷಗಳ ಘಟಕ ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಿ ಆದೇಶಿಸಿದೆ. (ರೂ. 5.00 ಲಕ್ಷ ಬ್ಯಾಂಕ್ ಸಾಲ + ರೂ. 5.00 ಲಕ್ಷ ನಿಗಮದಿಂದ ಸಹಾಯಧನ) ಈ ಯೋಜನೆಗೆ ತಗಲುವ ವೆಚ್ಚವನ್ನು ನಿಗಮದಲ್ಲಿ ಲಭ್ಯವಿರುವ ಅನುದಾನದಲ್ಲಿ ಭರಿಸುವ ಷರತ್ತಿನೊಂದಿಗೆ ಅನುಮೋದನೆ ನೀಡಲಾಗಿದೆ.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD 178 EXP-3 2020 ದಿನಾಂಕ: 17-06-2020 ಮತ್ತು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿಎಸ್ ಐಎಂಎಂ 2020 ದಿನಾಂಕ: 25-06-2020 ರಲ್ಲಿ ನೀಡಿರುವ ಸಹಮತಿಯನ್ವಯ ಆದೇಶ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ.ಸಿ.ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಸಮಾಜ ಕಲ್ಯಾಣ ಇಲಾಖೆ

**ಇವರಿಗೆ:-**

1. ಮಹಾಲೇಖಪಾಲರು, (ಎ & ಇ ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ, ಬೆಂಗಳೂರು
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
3. ವ್ಯವಸ್ಥಾಪಕ ನಿರ್ದೇಶಕರು, ಡಾ. ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ, ಬೆಂಗಳೂರು.

4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು

<u>ಪ್ರತಿಗಳು:</u>

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
2. ಸರ್ಕಾರದ ಉಪ ಕಾರ್ಯದರ್ಶಿ-1, ಆಪ್ತ ಸಹಾಯಕರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು

ಸರ್ಕಾರದ ಆದೇಶ ಸಂಖ್ಯೆ: ಸಕಇ 201 ಎಸ್‌ಎಲ್‌ಪಿ 2020, ಬೆಂಗಳೂರು ದಿನಾಂಕ:04 -09-2020

(ವೈಯಕ್ತಿಕ ಕುಶಲಕರ್ಮಿ ಘಟಕಗಳಿಗೆ ಅನ್ವಯವಾಗುವ ಮಾನದಂಡಗಳನ್ನು ಮಾತ್ರ ಪರಿಗಣಿಸುವುದು)

ಅನುಬಂಧ

ಮಾನದಂಡಗಳು:

1) ಫಲಾಪೇಕ್ಷಿಗಳು ಪರಿಶಿಷ್ಟ ಜಾತಿಗೆ ಸೇರಿದ ಮಾದಿಗ, ಸಮಗಾರ, ಡೋರ, ಮೋಚಿ ಜನಾಂಗಕ್ಕೆ ಸೇರಿದವರಾಗಿರಬೇಕು.
2) ನಿಗಮದ ಯೋಜನೆಗಳಡಿ 60 ದಿನಗಳ ಕೌಶಲ್ಯ ಅಭಿವೃದ್ಧಿ ತರಬೇತಿ ಅಥವಾ ಒಂದು ವರ್ಷದ ಸರ್ಟಿಫಿಕೇಟ್ ಕೋರ್ಸ್ ಅಥವಾ ಮೂರು ವರ್ಷದ ಡಿಪ್ಲಮೋ ಇನ್ ಲೆದರ್ ಟೆಕ್ನಾಲಜಿ ಅಥವಾ ಒಂದುವರೆ ವರ್ಷದ ಪಿಜಿ ಹೈಯರ್ ಡಿಪ್ಲಮೋ ಪಡೆದವರಾಗಿರಬೇಕು.
3) ಕುಶಲಕರ್ಮಿಗಳ ಸ್ವ-ಸಹಾಯ ಸಂಘ/ಸಹಕಾರ ಸಂಘಗಳು ಉತ್ಪಾದನಾ ಘಟಕಗಳನ್ನು ಸ್ಥಾಪಿಸಬೇಕಾದಲ್ಲಿ ಕನಿಷ್ಟ ಪಕ್ಷ 20 ರಿಂದ 30 ತರಬೇತಿ ಪಡೆದ ಕುಶಲಕರ್ಮಿಗಳು ಸಂಘ ರಚಿಸಿಕೊಂಡು ನೊಂದಾವಣೆ ಮಾಡಿಸಿರಬೇಕು.
4) ಚರ್ಮಕಾರರ ಸಹಕಾರ ಸಂಘ/ಸ್ವ- ಸಹಾಯ ಸಂಘಗಳನ್ನು ಸ್ಥಾಪಿಸಿ ಉತ್ಪಾದನೆಯಲ್ಲಿ ತೊಡಗಿರುವ ಕುಶಲಕರ್ಮಿ ಸಂಘಗಳಿಗೆ ಆದ್ಯತೆ ನೀಡಲಾಗುವುದು.
5) ನಿಗಮದ ಸಂಕೀರ್ಣಗಳಲ್ಲಿ ವಸತಿ ಕಾರ್ಯಾಗಾರ ಪಡೆದು ವಾಸಿಸುತ್ತಿರುವ ಚರ್ಮ ಕುಶಲಕರ್ಮಿ ಮತ್ತು ತರಬೇತಿ ಪಡೆದ ಕುಶಲಕರ್ಮಿಗಳಿಗೆ ಅಥವಾ ಕುಶಲಕರ್ಮಿಗಳ ಸ್ವ-ಸಹಾಯ / ಸಹಕಾರ ಸಂಘಗಳಿಗೆ ಆದ್ಯತೆ ನೀಡಲಾಗುವುದು.
6) ಕುಟುಂಬದ ವಾರ್ಷಿಕ ಆಧಾಯ ಗ್ರಾಮೀಣ ಪ್ರದೇಶದವರಿಗೆ ರೂ. 1,50,000/- ಮತ್ತು ನಗರ ಪ್ರದೇಶದವರಿಗೆ ರೂ. 2,00,000/- ಗಳ ಒಳಗಿರಬೇಕು.
7) ಶೂ / ಪಾದರಕ್ಷೆ / ಚರ್ಮ ವಸ್ತುಗಳ ತಯಾರಿಕೆಯಲ್ಲಿ ಅನುಭವ ಹೊಂದಿರಬೇಕು.
8) ವೈಯಕ್ತಿಕ ಘಟಕ ಸ್ಥಾಪಿಸಲು ಕನಿಷ್ಟ ಪಕ್ಷ 800-1000 ಚ.ಅ ಮತ್ತು ಸಾಂಸ್ಥಿಕ ಘಟಕ ಸ್ಥಾಪಿಸಲು ಕನಿಷ್ಟ ಪಕ್ಷ 2000-2500 ಚ.ಅ ಸ್ಥಳಾವಕಾಶ ಹೊಂದಿರಬೇಕು.

ಘಟಕ ವೆಚ್ಚ :

1) ರೂ. 10.00 ಲಕ್ಷ. ಇದರಲ್ಲಿ ರೂ. 5.00 ಲಕ್ಷ ಬ್ಯಾಂಕ್ ಸಾಲ ಮತ್ತು ನಿಗಮದಿಂದ ರೂ 5.00 ಲಕ್ಷಗಳನ್ನು ಸಹಾಯಧನದ ರೂಪದಲ್ಲಿ ನೀಡುವುದು.

------2

2) ವೈಯಕ್ತಿಕ ಕುಶಲಕರ್ಮಿ ಘಟಕ ಕನಿಷ್ಟ ಕೆಳಕಂಡ ಸಾಮರ್ಥ್ಯ ಹೊಂದಿರಬೇಕು.

1) ಕೆಲಸಗಾರರು : ಕುಶಲಕರ್ಮಿ– 01, ನುರಿತವರು – 02, ಅರೆ ನುರಿತವರು –02 ಒಟ್ಟು – 05.

2) ಒಂದು ದಿನದ ಉತ್ಪಾದನೆ ಸಾಮರ್ಥ್ಯ 40 ಜೊತೆ ಶೂ ಅಥವಾ 50 ಜೊತೆ ಚಪ್ಪಲಿ.

3) ಒಂದು ತಿಂಗಳ ಉತ್ಪಾದನೆ ಸಾಮರ್ಥ್ಯ 1000 ಜೊತೆ ಶೂ ಅಥವಾ 1250 ಜೊತೆ ಚಪ್ಪಲಿ.

**ಅನುಷ್ಠಾನ ವಿಧಾನ:**

1) ಈ ಯೋಜನೆಯನ್ನು ಪ್ರಚಾರ ಮಾಡಿ ಅರ್ಜಿಗಳನ್ನು ಆಹ್ವಾನಿಸುವುದು.

2) ನಿಗದಿತ ಅರ್ಜಿ ನಮೂನೆಯಲ್ಲಿ ಮಾಹಿತಿ ಪಡೆಯುವುದು.

3) ನಿಗಮದ ಜಿಲ್ಲಾ ಸಂಯೋಜಕರುಗಳನ್ನೊಳಗೊಂಡಂತೆ ಸಂಬಂಧಪಟ್ಟ ನೋಡಲ್ ಅಧಿಕಾರಿಗಳು ಮತ್ತು ವ್ಯವಸ್ಥಾಪಕರು (ತಾಂತ್ರಿಕ) ಇವರುಗಳನ್ನೊಳಗೊಂಡ ಸಮಿತಿಯು ಪೂರ್ಣ ಪರಿಶೀಲನೆ ನಂತರ ಉದ್ದೇಶಿತ ಫಲಾಪೇಕ್ಷಿಗಳ ವಿವರಗಳನ್ನು ಪಟ್ಟಿ ಮಾಡಿ ಜಿಲ್ಲಾ ಆಯ್ಕೆ ಸಮಿತಿಗೆ ಶಿಫಾರಸ್ಸು ಮಾಡುವುದು.

4) ಜಿಲ್ಲಾ ಆಯ್ಕೆ ಸಮಿತಿಯು ನಿಗಧಿಪಡಿಸಿದ ಗುರಿಗೆ ಅನುಸಾರ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವುದು.

5) ಕುಶಲಕರ್ಮಿಗಳು ಅಥವಾ ಕುಶಲಕರ್ಮಿಗಳ ಸ್ವ-ಸಹಾಯ / ಸಹಕಾರ ಸಂಘಗಳು ಸ್ವತಃ ವಂತಿಗೆ ಭರಿಸುವುದಾದಲ್ಲಿ ಅರ್ಜಿಯೊಂದಿಗೆ ವಿವರಗಳನ್ನು ಪ್ರಧಾನ ಕಛೇರಿಗೆ ಸಲ್ಲಿಸುವುದು.

6) ಜಿಲ್ಲಾ ಆಯ್ಕೆ ಸಮಿತಿಯ ಅನುಮೋದನೆ ನಂತರ ನಿಗಮವು ಸಿ.ಎಫ್.ಟಿ.ಐ ಚೆನ್ನೈ ಅಥವಾ ಸಿ.ಎಲ್.ಆರ್.ಐ ಚೆನ್ನೈ ಅಥವಾ ಕಿಲ್ಪ್, ಬೆಂಗಳೂರು ರವರ ತಾಂತ್ರಿಕ ಸಹಯೋಗದೊಂದಿಗೆ ಯಂತ್ರೋಪಕರಣಗಳನ್ನು ಮತ್ತು ಕಚ್ಚಾಮಾಲುಗಳನ್ನು ಟೆಂಡರ್ ಮೂಲಕ ಖರೀದಿಸಿ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ಕ್ರಮ ವಹಿಸುವುದು.

7) ಈ ರೀತಿ ಸ್ಥಾಪಿಸಿದ ಘಟಕಗಳ ನಿರಂತರ ಉಸ್ತುವಾರಿಗಾಗಿ ನಿಗಮದಿಂದ ಒಬ್ಬ ತಾಂತ್ರಿಕ ಸಮನ್ವಯಕಾರರನ್ನು (Technical Co-ordinator)) ನೇಮಿಸುವುದು.

8) ನಿಗಮದಿಂದ ಉತ್ಪಾದನಾ ಘಟಕವನ್ನು ಸ್ಥಾಪಿಸಿಕೊಟ್ಟು ಮೈಕ್ರೊ ಯೂನಿಟ್ ಎಂದು ನೊಂದಾಯಿಸಿ ನಿರಂತರ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ನಿಗಮದ ಮಾರುಕಟ್ಟೆ ಸಹಾಯ ಯೋಜನೆಯಡಿ ಅಳವಡಿಸಿಕೊಳ್ಳುವುದು.

9) ಸ್ವತಃ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿಕೊಳ್ಳಲು ಅವಕಾಶ ನೀಡುವುದು.

------3

ಅರ್ಜಿದಾರರು ಸಲ್ಲಿಸಬೇಕಾದ ದಾಖಲಾತಿಗಳು:

1. ಕುಶಲಕರ್ಮಿ ಸ್ವ-ಸಹಾಯ ಸಂಘ ಅಥವಾ ಸಹಕಾರ ಸಂಘ ನೊಂದಾವಣೆ ಪತ್ರ.
2. ಸಂಘದ ಸದಸ್ಯರುಗಳ ಪಟ್ಟಿ ಛಾಯಾಚಿತ್ರಗಳೊಂದಿಗೆ.
3. ವಿಸ್ಕೃತ ಯೋಜನಾ ವರದಿ.
4. ಎಲ್ಲಾ ಸದಸ್ಯರುಗಳ ಇತ್ತೀಚಿನ ಜಾತಿ ಮತ್ತು ಆದಾಯ ಪ್ರಮಾಣ ಪತ್ರ (ಆರ್.ಡಿ ಸಂಖ್ಯೆ ಹೊಂದಿರಬೇಕು.)
5. ಶೈಕ್ಷಣಿಕ ಪ್ರಮಾಣ ಪತ್ರಗಳು ಹಾಗೂ ತರಬೇತಿ ಪ್ರಮಾಣ ಪತ್ರಗಳು.
6. ಆಧಾರ್ ಕಾರ್ಡ್ ಕಡ್ಡಾಯ.
7. ಪಡಿತರ ಚೀಟಿ /ಚುನಾವಣೆ ಗುರುತಿನ ಚೀಟಿ.
8. ತರಬೇತಿ ಪ್ರಮಾಣ ಪತ್ರ.
9. ವೃತ್ತಿ ಪ್ರಮಾಣ ಪತ್ರ/ ಲಿಡ್‌ಕರ್ ತಾಂತ್ರಿಕ ವಿಭಾಗದಿಂದ ಪಡೆದ ಕೌಶಲ್ಯ ಪ್ರಮಾಣ ಪತ್ರ ಇದ್ದಲ್ಲಿ.

(ಕೆ.ಸಿ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಸಮಾಜ ಕಲ್ಯಾಣ ಇಲಾಖೆ